**ಸಿ.ಸಿ.ನಂ.: 1834/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **24-04-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು - ಆರೋಪಿ ಪರ ಶ್ರೀ. ವಿ.ಎಸ್.ಪಿ. ವಕೀಲರಿಂದ</u>**

1. ನಮ್ಮ ಊರು ಕುಮಟಾ ತಾಲೂಕು ಬರ್ಗಿ ಗ್ರಾಮದ ಕುರಿಗದ್ದೆ ಎಂದರೆ ಸರಿ. ಆರೋಪಿತಳು ಅಂಕೋಲಾ ತಾಲೂಕಿನವರು ಎಂದರೆ ಸರಿ. ನಾನು ಜೆಸಿಬಿಯನ್ನು ಲೀಸ್ ನ ಮೇಲೆ ತೆಗೆದುಕೊಂಡು ಮಣ್ಣನ್ನು ಒಡೆಯುವ ಕೆಲಸ ಹಾಗೂ ತೆಂಗಿನಕಾಯಿ ಹಾಗೂ ಅಡಿಕೆಯ ವ್ಯಾಪಾರವನ್ನು ಮಾಡುತ್ತೇವೆ. ನನ್ನ ಹೆಸರಿನಲ್ಲಿ ಸಾಮಾಯಿಕವಾಗಿ ಗದ್ದೆ ಜಮೀನುಗಳು ಇವೆ. ಷದ್ರಿ 6 ಗುಂಟೆ 8 ಆಣೆ ಜಾಗ ಇದ್ದು ಅದು ಸಾಮಾಯಿಕ ಹೆಸರಿನಲ್ಲಿ ಇದೆ. ಷದ್ರಿ ಸಾಮಾಯಿಕವು ನಾನು ಹಾಗೂ ನನ್ನ ಸಹೋದರನ ಹೆಸರಿನಲ್ಲಿ ಇದೆ. ಷದ್ರಿ ಜಜಮೀನು ಹೊನ್ನಾವರ ತಾಲೂಕಿನ ಕೆಳಗಿನೂರು ಗ್ರಾಮದಲ್ಲಿ ಇದೆ. ಷದ್ರಿ ಜಮೀನನ್ನು ನಾನು ಹಾಗೂ ನನ್ನ ಅಣ್ಣ ಒಟ್ಟಾಗಿ ನೋಡಿಕೊಳ್ಳುತ್ತೇವೆ. ನಾನು ಶಿರ್ಶಿಯ ದೇವಿ ಮನೆಯಲ್ಲಿ 12 ವರ್ಷದ ಹಿಂದೆ ನನ್ನ ಹೆಂಡತಿಯ ಜಮೀನನ್ನು ನೋಡಿಕೊಳ್ಳುತ್ತಾ ಅಲ್ಲಿ ವಾಸ್ಯವ್ಯದಲ್ಲಿ ಇದ್ದೇನೆ. ನಾನು ಕಳೇದ 7-8 ವರ್ಷದಿಂದ ಕುಮಟಾ ತಾಲೂಕು ಬರ್ಗಿ ಗ್ರಾಮದ ಕುರಿಗದ್ದೆ ಎಂಬಲ್ಲಿ ವಾಸ್ತವ್ಯ ಇದ್ದೇನೆ. ನಾನು ಕುರಿಗದ್ದೆಯಲ್ಲಿ ಭಾಡಿಗೆ ಮನೆಯಲ್ಲಿ ವಾಸ್ಯವ್ಯದಲ್ಲಿ ಇದ್ದೇನೆ. ನಾನು ಷದ್ರಿ ಮನೆಯಲ್ಲಿ ನನ್ನ ಹೆಂಡತಿ ಹಾಗೂ ಇಬ್ಬರು ಮಕ್ಕಳೊಂದಿಗೆ ವಾಸ್ತವ್ಯದಲ್ಲಿ ಇದ್ದೇನೆ. ಅಲ್ಲಿ ಷದ್ರಿ ಇಬ್ಬರು ಮಕ್ಕಳ ಪೈಕಿ ಒಬ್ಬರು ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದು, ಇನ್ನೊಬ್ಬರು ಎಸ್ ಎಸ್ ಎಲ್ ಸಿ ಕಲಿಯುತ್ತಿದ್ದಾರೆ.

**ಸಿ.ಸಿ.ನಂ.: 1834/2025**

ಪಿ.ಡಬ್ಲ್ಯೂ:1

2. ನನಗೆ ಹೊನ್ನಾವರದ ಕೆಳಗಿನೂರಿನ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇರುವುದಿಲ್ಲ. ನಾನು ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಲುವಾಗಿ ನನಗೆ ವಯಕ್ತಿಕ ಮಾಹಿತಿ ಇದೆ. ನಾನು ನನ್ನ ಫಿರ್ಯಾದಿಯಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನನ ಉದ್ಯೋಗ ಜೆಸಿಬಿ ಉದ್ಯೋಗ ಎಂದು ನಮೂದು ಮಾಡಿರುತ್ತೇನೆ. ನಾನು ರೈತಾಪಿ ಕೆಲಸವನ್ನು ಸಹ ಮಾಡುತ್ತೇನೆ. ರೈತಾಪಿ ಕೆಲಸ ಎಂದರೆ ತೋಟ ಹಾಗೂ ಗದ್ದೆಗಳಿಗೆ ಕೆಲಸದವರನ್ನು ನೇಮಿಸಿ ಕೆಲಸ ಮಾಡಿಸುವುದಾಗಿದೆ. ನನಗೆ ಯಾರು ಯಾವ ಕೆಲಸವನ್ನು ಹೇಳಿದ್ದರೂ ಸಹ ನಾನು ಸದ್ರಿ ಕೆಲಸವನ್ನು ಮಾಡುತ್ತೇನೆ. ನಾನು ಈ ಕೆಲಸಗಳನ್ನು ಗಂಗಾವಳಿ, ಕಂದಗಾಲು ಹಾಗೂ ಯಲ್ಲಾಪುರಗಳಲ್ಲಿ ಮಾಡಿರುತ್ತೇನೆ. ಈ ರೀತಿಯಾಗಿ ಕೆಲಸ ಮಾಡುವ ಕುರಿತಾಗಿ ಸದ್ರಿ ಮಾಲಿಕರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ಬಳಿ ಯಾವುದೇ ಒಪ್ಪಂದ ಇರುವುದಿಲ್ಲ ಅವರು ಹೇಳಿದ ಕೆಲಸವನ್ನು ನಾನು ಮಾಡಿಸುತ್ತೇನೆ ಎಂದು ನುಡಿಯುತ್ತಾರೆ.

3. ನಾನು ನನ್ನ ಫಿರ್ಯಾದಿ, ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ಆರೋಪಿಗೆ ಕಳುಹಿಸಿದ್ದೇನೆ ಎನ್ನಲಾದ ನೊಟೀಸನಲ್ಲಿ ನನ್ನ ಕೆಲಸವು ಜೆಸಿ ಬಿ ಕೆಲಸ ಹಾಗೂ ಅಡಿಗೆ ಹಾಗೂ ತೆಂಗಿನ ಕಾಯಿ ಮಾರಾಟ ಮಾಡುತ್ತೇನೆ ಎಂಬ ಬಗ್ಗೆ ಬರೆಸಿರುವುದಿಲ್ಲ. ರಾ ರೀತಿಯಾಗಿ ಬರೆಯಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

4. ನಾನು ಕುಮಟಾದ ಕುರಿಗದ್ದೆಯಲ್ಲಿರುವ ಭಾಡಿಗೆ ಮನೆಯು ಪ್ರಶಾಂತ ನಾಯ್ಕ ಇವರಿಗೆ ಸೇರಿದ್ದಾಗಿರುತ್ತದೆ. ಸದ್ರಿ ಮನೆಯು ನಾನು 2500 ಭಾಡಿಗೆ ಹಣವನ್ನು ನೀಡುತ್ತೇನೆ. ನಾನು ಕಳೆದ 8

ವರ್ಷಗಳಿಂದ ಅದೇ ಮನೆಯಲ್ಲಿ ಭಾಡಿಗೆಯಲ್ಲಿ ಇರುತ್ತೇನೆ. ಈ 8 ವರ್ಷಗಳಿಂದ ಭಾಡಿಗೆ ಇರುವ ಕುರಿತಾಗಿ ಯಾವುದೇ ಭಾಡಿಗೆ ಕರಾರು ಮಾಡಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ